# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

## ಸತ್ರ ಮೊಕದ್ದಮೆ ನಂಃ 54/2025

| | | |
|---|---|---|
| ಸಾಕ್ಷಿದಾರರ ಹೆಸರು | - ಮೋಹನಕುಮಾರ | ಪಿಡಬ್ಲೂ -13 |
| ತಂದೆಯ ಹೆಸರು | - ಮರಿಸಿದ್ದೇಗೌಡ | ಸಿಡಬ್ಲೂ -24 |
| ವಯಸ್ಸು | - 60 ವರ್ಷ | |
| ಉದ್ಯೋಗ | - ನಿವೃತ್ತ ತಹಸೀಲ್ದಾರ್ | |
| ವಾಸ ಸ್ಥಳ | - ಹಾಸನ | |

ದಿನಾಂಕಃ 12-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನಾನು 2024 ನೇ ಇಸವಿಯಿಂದ ದಿಃ 31-07-2025 ರವರೆಗೆ ಹಾಸನ ತಾಲ್ಲೂಕಿನ ತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 21-01-2025 ರಂದು ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯ ಚಾಸಾ.21 ಪಿ.ಎಸ್.ಐ. ನಂದಿನಿರವರು ನನಗೆ ಮನವಿ ಸಲ್ಲಿಸಿ ತಮ್ಮ ಠಾಣೆಯ ಮೊಕದ್ದಮೆ ಸಂಖ್ಯೆಃ 7/2025 ಕ್ಕೆ ಸಂಬಂಧಿಸಿದಂತೆ ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿದ್ದ ಮೃತ ಶಾರದ ಕೋಂ ಮಂಜುನಾಥ ರವರ ಶವ ತನಿಖೆಯನ್ನು ನಡೆಸಿಕೊಡುವಂತೆ ಕೋರಿದ್ದರು. ಸದರಿ ಮನವಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮನವಿಯನ್ನು ನಿಪಿ.25. ಎಂದು

ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು.

3. ಸದರಿ ಮನವಿಯ ಮೇರೆಗೆ ನಾನು ಫ್ರಾಸಾ.6, ಚಾಸಾ.10 ಮತ್ತು ಚಾಸಾ.11 ರವರಿಗೆ ಶವ ತನಿಖೆಗೆ ಪಂಚರಾಗಿ ಸಹಕರಿಸಬೇಕೆಂದು ನೋಟೀಸನ್ನು ಜಾರಿ ಮಾಡಿ ಬರಮಾಡಿಕೊಂಡೆನು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.9 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ.9(ಬಿ) ಎಂದು ಗುರುತಿಸಲಾಯಿತು.

4. ನಂತರ ಅದೇ ದಿನ ಅಂದರೆ ದಿಃ 21-01-2025 ರಂದು ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಮೃತ ಶಾರದ ಕೋಂ ಮಂಜುನಾಥರವರ ಶವ ತನಿಖೆಯನ್ನು ನಡೆಸಿ ಆ ಬಗ್ಗೆ ಪಂಚನಾಮೆಯನ್ನು ಜರುಗಿಸಿದೆನು. ಶವ ತನಿಖೆಯ ಸಮಯದಲ್ಲಿ ಮೃತಳ ಕೆಳ ತುಟಿಯ ಒಳಭಾಗದಲ್ಲಿ 2 x 1 ಸೆಂ ಮೀ ಉದ್ದದ ರಕ್ತಗಾಯ ಇರುವುದು ಕಂಡುಬಂತು, ಆಕೆಯ ಹೊಟ್ಟೆಯ ಮೇಲೆ ರಕ್ತ ಹೆಪ್ಪುಗಟ್ಟಿದ್ದಂತೆ ಕಂಡುಬಂತು, ಮೃತಳಿಗೆ ಸಿಜರಿಯನ್ ಆಪರೇಷನ್ ಆಗಿದ್ದು ರಕ್ತಸ್ರಾವವಾಗದಂತೆ ಪ್ಯಾಡ್ ಹಾಕಿರುವುದು ಕಂಡುಬಂತು, ಅದನ್ನು ಹೊರತುಪಡಿಸಿ ಆಕೆಯ ದೇಹದ ಮೇಲೆ ಯಾವುದೇ ಬಟ್ಟೆಗಳು ಇರಲಿಲ್ಲ.

5. ಶವ ತನಿಖಾ ಸಮಯದಲ್ಲಿ ಫ್ರಾಸಾ.4, ಚಾಸಾ.5, ಫ್ರಾಸಾ.5 ಮತ್ತು ಚಾಸಾ.7 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ಸಾಕ್ಷಿದಾರರ ಹೇಳಿಕೆ ಮತ್ತು ಶವ ತನಿಖೆಯ ಆಧಾರದ ಮೇರೆಗೆ ದಿಃ 14-01-2025 ರಂದು ಸಂಕ್ರಾಂತಿಯ ಹಬ್ಬದ ದಿನ ಆರೋಪಿ ಮಂಜುನಾಥ ಕೆಲಸಕ್ಕೆ ಹೋದವನು ವಿಪರೀತವಾಗಿ ಕುಡಿದು ಮನೆಗೆ ವಾಪಸ್ ಬಂದು 9 ತಿಂಗಳ ಗರ್ಭಿಣಿಯಾಗಿದ್ದ ತನ್ನ ಹೆಂಡತಿ ಶಾರದಳಿಗೆ ಊಟ ಬಡಿಸುವಂತೆ ಕೇಳಿ ತನ್ನೊಂದಿಗೆ ಮಲಗು ಬಾ ಎಂದು ಕರೆದು ಆಕೆಯೊಂದಿಗೆ ಗಲಾಟೆ ತೆಗೆದು ಆಕೆಯ ತಲೆ ಕೂದಲನ್ನು ಹಿಡಿದು ಎಳೆದಾಡಿ ತನ್ನ ಕೈಯನ್ನು ಮುಷ್ಟಿ ಕಟ್ಟಿ ಆಕೆಯ ತಲೆಗೆ, ಮುಖಕ್ಕೆ ಹೊಡೆದು ಗರ್ಭಿಣಿಯಾಗಿದ್ದ ಆಕೆಯ ಹೊಟ್ಟೆಗೆ ತನ್ನ ಕಾಲಿನಿಂದ ಜಾಡಿಸಿ ಒದ್ದ ಪರಿಣಾಮ ಆಕೆಗೆ ಸುಸ್ತಾಗಿ ಪ್ರಜ್ಞಾಹೀನ ಸ್ಥಿತಿ ತಲುಪಿದ್ದಾಗಿ ದಿಃ 15-01-2025 ರಂದು ಆಕೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ, ನಂತರ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಆಕೆಯನ್ನು ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ, ಅಲ್ಲಿ ವೈದ್ಯರು ಆಕೆಗೆ ಸಿಜೆರಿಯನ್ ಮಾಡಿ ಆಕೆಯ ಗರ್ಭದಲ್ಲಿದ್ದ ಮಗುವನ್ನು ಹೊರತೆಗೆದಿದ್ದಾಗಿ, ಆಕೆಗೆ ಪ್ರಜ್ಞೆ ಬಾರದೇ ಮತ್ತು ಚಿಕಿತ್ಸೆ ಫಲಕಾರಿಯಾಗದೇ ದಿಃ 21-01-2025 ರಂದು ಸದರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಗಿ ಅಭಿಪ್ರಾಯಪಟ್ಟರು.

6. ನಾನು ಜರುಗಿಸಿದ ಶವ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಶವ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.10 ಎಂದು

ಗುರುತಿಸಲಾಗಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ನಾನು ಶವ ಪಂಚನಾಮೆಯನ್ನು ಜರುಗಿಸಿದ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿದ್ದಾರೆ. ಸಾಕ್ಷಿಯು ಈಗಾಗಲೇ ನಿಪಿ.5 ರಿಂದ ಪಿ.8 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ಪೊಲೀಸರು ತೆಗೆದ ಫೋಟೋಗಳು ಅವೇ ಎಂದು ನುಡಿದು ಅವುಗಳಲ್ಲಿ ತಾನು ತನಿಖೆ ನಡೆಸಿದ ಶಾರದರವರ ಶವ ಕಂಡುಬರುವುದಾಗಿ ನುಡಿರುತ್ತಾರೆ. ಅವುಗಳ ಪೈಕಿ ನಿಪಿ.5 ರಲ್ಲಿ ತನ್ನ ಇರುವಿಕೆ ಕಂಡುಬರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

7. ಶವ ಪಂಚನಾಮೆಯನ್ನು ಜರುಗಿಸಿದ ಬಳಿಕ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಹಾಸನದ ಹಿಮ್ಸ್ ಆಸ್ಪತ್ರೆಯ ಮುಖ್ಯಸ್ಥರಿಗೆ ನಮೂನೆ 146 ಮತ್ತು ವರದಿಯೊಂದಿಗೆ ನೀಡಿರುತ್ತೇನೆ. ಸದರಿ ನಮೂನೆ ಮತ್ತು ವರದಿಯನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ನಮೂನೆ ಮತ್ತು ವರದಿಯನ್ನು ಕ್ರಮವಾಗಿ ನಿಪಿ.26 ಮತ್ತು ಪಿ.27 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.26(ಎ) ಮತ್ತು ಪಿ.27(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಜಿ.ಎಸ್.ಎಸ್. ವಕೀಲರಿಂದಃ-</u>

8. ಶವ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ನಿಮ್ಮೊಂದಿಗೆ ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ ಪ್ರಾಸಾ.6, ಚಾಸಾ.10 ಮತ್ತು

ಚಾಸಾ.11 ರವರು ಇದ್ದರು ಎನ್ನುತ್ತಾರೆ. ಆ ಸಮಯದಲ್ಲಿ ಒಟ್ಟು ಎಷ್ಟು ಫೋಟೋಗಳನ್ನು ತೆಗೆಯಲಾಯಿತು ಎಂದರೆ ಸಾಕ್ಷಿ 5 ರಿಂದ 6 ಎನ್ನುತ್ತಾರೆ. ಅವುಗಳ ಪೈಕಿ ನೀವು ಎಷ್ಟರಲ್ಲಿ ಇದ್ದೀರಿ ಎಂದರೆ ಸಾಕ್ಷಿ ಒಂದರಲ್ಲಿ ಎನ್ನುತ್ತಾರೆ.

9. ದಿನಾಂಕಃ 21-01-2025 ರಂದು ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯ ಚಾಸಾ.21 ಪಿ.ಎಸ್.ಐ. ನಂದಿನಿರವರು ನನಗೆ ನಿಪಿ.25 ರಂತೆ ಮನವಿ ಸಲ್ಲಿಸಿ ತಮ್ಮ ಠಾಣೆಯ ಮೊಕದ್ದಮೆ ಸಂಖ್ಯೆಃ 7/2025 ಕ್ಕೆ ಸಂಬಂಧಿಸಿದಂತೆ ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿದ್ದ ಮೃತ ಶಾರದ ಕೋಂ ಮಂಜುನಾಥ ರವರ ಶವ ತನಿಖೆಯನ್ನು ನಡೆಸಿಕೊಂಡುವಂತೆ ಕೋರಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

10. ಸದರಿ ಮನವಿಯ ಮೇರೆಗೆ ನಾನು ಪ್ರಾಸಾ.6, ಚಾಸಾ.10 ಮತ್ತು ಚಾಸಾ.11 ರವರಿಗೆ ಶವ ತನಿಖೆಗೆ ಪಂಚರಾಗಿ ಸಹಕರಿಸಬೇಕೆಂದು ನಿಪಿ.9 ರಂತೆ ನೋಟೀಸನ್ನು ಜಾರಿ ಮಾಡಿ ಬರಮಾಡಿಕೊಂಡೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಅದೇ ದಿನ ಅಂದರೆ ದಿಃ 21-01-2025 ರಂದು ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಮೃತ ಶಾರದ ಕೋಂ ಮಂಜುನಾಥರವರ ಶವ ತನಿಖೆಯನ್ನು ನಡೆಸಿ ಆ ಬಗ್ಗೆ ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

11. ಶವ ತನಿಖೆಯ ಸಮಯದಲ್ಲಿ ಮೃತಳ ಕೆಳ ತುಟಿಯ ಒಳಭಾಗದಲ್ಲಿ 2 x 1 ಸೆಂ ಮೀ ಉದ್ದದ ರಕ್ತಗಾಯ ಇರುವುದು ಕಂಡುಬಂತು, ಆಕೆಯ ಹೊಟ್ಟೆಯ ಮೇಲೆ ರಕ್ತ ಹೆಪ್ಪುಗಟ್ಟಿದ್ದಂತೆ ಕಂಡುಬಂತು, ಮೃತಳಿಗೆ ಸಿಜರಿಯನ್ ಆಪರೇಷನ್ ಆಗಿದ್ದು ರಕ್ತಸ್ರಾವವಾಗದಂತೆ ಪ್ಯಾಡ್ ಹಾಕಿರುವುದು ಕಂಡುಬಂತು, ಅದನ್ನು ಹೊರತುಪಡಿಸಿ ಆಕೆಯ ದೇಹದ ಮೇಲೆ ಯಾವುದೇ ಬಟ್ಟೆಗಳು ಇರಲಿಲ್ಲ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

12. ಶವ ತನಿಖಾ ಸಮಯದಲ್ಲಿ ಪ್ರಾಸಾ.4, ಚಾಸಾ.5, ಪ್ರಾಸಾ.5 ಮತ್ತು ಚಾಸಾ.7 ರವರ ಹೇಳಿಕೆಗಳನ್ನು ಪಡೆದುಕೊಂಡೆನು, ಸಾಕ್ಷಿದಾರರ ಹೇಳಿಕೆ ಮತ್ತು ಶವ ತನಿಖೆಯ ಆಧಾರದ ಮೇರೆಗೆ ಪಂಚರು ದಿಃ 14-01-2025 ರಂದು ಸಂಕ್ರಾಂತಿಯ ಹಬ್ಬದ ದಿನ ಆರೋಪಿ ಮಂಜುನಾಥ ಕೆಲಸಕ್ಕೆ ಹೋದವನು ವಿಪರೀತವಾಗಿ ಕುಡಿದು ಮನೆಗೆ ವಾಪಸ್ ಬಂದು 9 ತಿಂಗಳ ಗರ್ಭಿಣಿಯಾಗಿದ್ದ ತನ್ನ ಹೆಂಡತಿ ಶಾರದಳಿಗೆ ಊಟ ಬಡಿಸುವಂತೆ ಕೇಳಿ ತನ್ನೊಂದಿಗೆ ಮಲಗು ಬಾ ಎಂದು ಕರೆದು ಆಕೆಯೊಂದಿಗೆ ಗಲಾಟೆ ತೆಗೆದು ಆಕೆಯ ತಲೆ ಕೂದಲನ್ನು ಹಿಡಿದು ಎಳೆದಾಡಿ ತನ್ನ ಕೈಯನ್ನು ಮುಷ್ಟಿ ಕಟ್ಟಿ ಆಕೆಯ ತಲೆಗೆ, ಮುಖಕ್ಕೆ ಹೊಡೆದು ಗರ್ಭಿಣಿಯಾಗಿದ್ದ ಆಕೆಯ ಹೊಟ್ಟೆಗೆ ತನ್ನ ಕಾಲಿನಿಂದ ಜಾಡಿಸಿ ಒದ್ದ ಪರಿಣಾಮ ಆಕೆಗೆ ಸುಸ್ತಾಗಿ ಪ್ರಜ್ಞಾಹೀನ ಸ್ಥಿತಿ ತಲುಪಿದ್ದಾಗಿ ದಿಃ 15-01-2025 ರಂದು ಆಕೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ, ನಂತರ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ

ಆಕೆಯನ್ನು ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ, ಅಲ್ಲಿ ವೈದ್ಯರು ಆಕೆಗೆ ಸಿಜೆರಿಯನ್ ಮಾಡಿ ಆಕೆಯ ಗರ್ಭದಲ್ಲಿದ್ದ ಮಗುವನ್ನು ಹೊರತೆಗೆದಿದ್ದಾಗಿ, ಆಕೆಗೆ ಪ್ರಜ್ಞೆ ಬಾರದೇ ಮತ್ತು ಚಿಕಿತ್ಸೆ ಫಲಕಾರಿಯಾಗದೇ ದಿಃ 21-01-2025 ರಂದು ಸದರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಗಿ ಅಭಿಪ್ರಾಯಪಟ್ಟರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ನಿಪಿ.10 ಶವ ಪಂಚನಾಮೆಯನ್ನು ಜರುಗಿಸಿದ ಸಮಯದಲ್ಲಿ ನಿಪಿ.5 ರಿಂದ ಪಿ.8 ಫೋಟೋಗಳನ್ನು ಪೊಲೀಸರು ತೆಗೆದಿದ್ದಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಶವ ಪಂಚನಾಮೆಯನ್ನು ಜರುಗಿಸಿದ ಬಳಿಕ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಹಾಸನದ ಹಿಮ್ಸ್ ಆಸ್ಪತ್ರೆಯ ಮುಖ್ಯಸ್ಥರಿಗೆ ನಿಪಿ.26 ನಮೂನೆ 146 ಮತ್ತು ನಿಪಿ.27 ವರದಿಯೊಂದಿಗೆ ನೀಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಕರ್ತವ್ಯ ನಿರ್ವಹಿಸದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ